# ಏಕಲವ್ಯ ನ್ಯಾಯ

ಮಹಾಭಾರತ ಕಥೆಯಲ್ಲಿ ದುರಂತ ಅಂತ್ಯಕಂಡ ವ್ಯಕ್ತಿಗಳಲ್ಲಿ ಮೊದಲ ಸಾಲಿನಲ್ಲಿ ಬರುವ ಹೆಸರು ಕರ್ಣನದು. ದೈವದಿಂದ, ಹೆತ್ತವರಿಂದ, ಗುರುಗಳಿಂದ ಹಾಗೂ ಒಡಹುಟ್ಟಿದ ಸಹೋದರರಿಂದ ಕರ್ಣನಿಗಾದ ಅನ್ಯಾಯಕ್ಕೆ ಎಣೆಯೇ ಇಲ್ಲ ಎಂಬುದು ಒಕ್ಕೊರಲಿನ ಮಾತು. ಕೌರವರ ಇಡೀ ಸಾಮ್ರಾಜ್ಯ ನಿಂತದ್ದೇ ಕರ್ಣನ ಮೇಲೆ. ಇದನ್ನು ಪಂಪ, ರನ್ನ ಮತ್ತು ಕುಮಾರವ್ಯಾಸರ ಕಾವ್ಯಗಳು ಕುರು ಸಾಮ್ರಾಜ್ಯದ ಬಗ್ಗೆ ಇದ್ದ ಕರ್ಣನಿಷ್ಠೆಯನ್ನು ಹೃದಯ ತೋಯುವಂತೆ ಬೆಳಗಿಸಿದ್ದಾರೆ.

‘ಕಳಚಿ ದುರಿಯೋಧನನ ಬೆಳುಗೊಡೆ ನೆಲಕೆ ಬೀಳ್ವಂದದಲಿ... ಕರ್ಣಶಿರ ಕೆಡೆದುದು ಧರಿತ್ರಿಯಲಿ’ ಎಂದು ಕುಮಾರವ್ಯಾಸ ಕರ್ಣನ ಸಾವು ಎಂದರೆ, ಅದು ಸಾಮ್ರಾಜ್ಯವೊಂದರ ಪತನವೆಂದೇ ರೂಪಕದಲ್ಲಿ ಕಾಣಿಸಿದ್ದಾನೆ. ಇದು ನಿಜವೂ ಹೌದು! ‘ತೇರು ಹರಿದ ಮೇಲೆ ಪರಿಸೆ ಇಲ್ಲ, ಕರ್ಣ ಸತ್ತಮೇಲೆ ಯುದ್ಧವಿಲ್ಲ’ ಎಂದು ಕನ್ನಡದ ಗಾದೆಯೊಂದು ಹೇಳಿದೆ. ಕರ್ಣನ ಬದುಕಿನ ದುರಂತಕ್ಕೆ ಇಷ್ಟಾದರೂ ನ್ಯಾಯವನ್ನು ಕನ್ನಡದ ಪ್ರತಿಭಾವಂತ ಮನಸ್ಸುಗಳು ಕೊಟ್ಟಿವೆ. ಆದರೆ ಕರ್ಣನ ದುರಂತದಂತೆಯೇ ಮಹಾಭಾರತದಲ್ಲಿ ಘಟಿಸಿದ ಏಕಲವ್ಯನ ದುರಂತ ವ್ಯಾಸರನ್ನಾಗಲಿ ಅಥವಾ ಕನ್ನಡದ ಯಾವ ಶಿಷ್ಟ ಕವಿಗಳನ್ನಾಗಲಿ ಅಷ್ಟಾಗಿ ಕಲಕಿಲ್ಲ! ಆದರೆ ಇಂಡಿಯಾದ ಬಹುಪಾಲು ಶೋಷಿತ ತಳಸಮುದಾಯಗಳು ತಮ್ಮನ್ನು ಗುರುತಿಸಿಕೊಳ್ಳುವುದು ಏಕಲವ್ಯನೊಂದಿಗೆ ಎನ್ನುವುದು ಆಶ್ಚರ್ಯದ ಸಂಗತಿ!

ಶ್ರೇಣೀಕೃತ ಜಾತಿ ವ್ಯವಸ್ಥೆಯಿರುವ ಭಾರತದಲ್ಲಿ ಶೂದ್ರರು, ದಲಿತರು, ಮಹಿಳೆಯರು ಹಾಗೂ ಆದಿವಾಸಿಗಳನ್ನು ನೋಡುವ ಕಣ್ಣು ಮತ್ತು ಹೃದಯ ಒಂದೇ ಎನ್ನುವುದನ್ನು ಪುರಾಣ ಮತ್ತು ಇತಿಹಾಸದ ಸ್ಮೃತಿಗಳು ಹೇಳುತ್ತವೆ. ‘ಏಕಲವ್ಯನ ಕಥೆ ಹೇಳುವಲ್ಲಿ ಮಾತ್ರ ನವಿರಾದ ಒಂದೇ ಸ್ವರ ಮತ್ತು ಅತಿ ಸಂಕ್ಷಿಪ್ತತೆ ಏಕೆ ಬಳಕೆಯಾದವು?’ ಎನ್ನುವುದನ್ನು ಮರಾಠಿ ಸಂಶೋಧಕಿ ದುರ್ಗಾ ಭಾಗವತ ಅವರು ಪ್ರಶ್ನಿಸಿದ್ದಾರೆ. ‘ಏಕಲವ್ಯನ ವಿಷಯದಲ್ಲಾದ ಅನ್ಯಾಯದ ಜನಕರು ಇಬ್ಬರು: ದ್ರೋಣರು ಮತ್ತು ಅರ್ಜುನ’. ಏಕಲವ್ಯನಲ್ಲಿದ್ದ ಚಾಪವಿದ್ಯಾ ಪ್ರತಿಭೆಯನ್ನು ಪ್ರಜ್ಞಾಪೂರ್ವಕವಾಗಿಯೇ ಚಿವುಟಿದ ಆಚಾರ್ಯ ದ್ರೋಣ ಮತ್ತು ಅರ್ಜುನರು ಮಹಾಭಾರತದಲ್ಲಿ ಅಮರರಾದರು. ಆದರೆ ಅವರಷ್ಟೇ ಪ್ರತಿಭಾಶಾಲಿಯಾಗಿದ್ದರೂ ಕುಟಿಲತೆಗೆ ಬಲಿಯಾದ ಏಕಲವ್ಯ ಮಾತ್ರ ತೆರೆಮರೆಗೆ ಸರಿದ!

ಸ್ವತಃ ಬೇಡನಾಗಿದ್ದ ವ್ಯಾಸರು ತಮ್ಮ ಸೃಷ್ಟಿಯ ಮಹಾಭಾರತದಲ್ಲಿ ತನ್ನ ಬಂಧುವೇ ಆದ ಇನ್ನೊಬ್ಬ ಬೇಡ ಏಕಲವ್ಯನ ಬಗ್ಗೆ ಏಕೆ ಮೌನವಾದರು ಎನ್ನುವುದಕ್ಕೆ ಉತ್ತರವಿಲ್ಲ! ತನ್ನ ಹೆಬ್ಬೆರಳನ್ನು ಕತ್ತರಿಸಿ ದ್ರೋಣರಿಗೆ ಕೊಡುವಾಗಿನ ಏಕಲವ್ಯನಿಗೆ ಉಂಟಾದ ದಿಗ್ಭ್ರಮೆ, ಉದ್ವಿಗ್ನತೆ, ಭವಿಷ್ಯದ ಬಗ್ಗೆ ಆತಂಕ, ಅವನ ತಂದೆ–ತಾಯಿಗಾದ ನಿರಾಶೆ, ಕೋಪ, ಇವೆಲ್ಲಾ ವ್ಯಾಸರಿಗೆ ಮುಖ್ಯವಾಗಲಿಲ್ಲ! ಹರ ಮುನಿದನೆಂದು ಗುರುವಿನ ಠಾವಿಗೆ ಬಂದರೆ, ಅರ್ಜುನನಿಗೋಸ್ಕರ ಬಲಿಯಾಗಲು ತನಗೇ ಖಡ್ಗ ನೀಡಿದ ಗುರುವನ್ನು ಕಂಡ ಅವನ ಮನೋವ್ಯಾಕುಲ ಎಂಥದ್ದಾಗಿರಬೇಕು! ಇವೆಲ್ಲವನ್ನೂ ಹೇಳುವ ಮಾತುಗಳು ಕೊನೆಯವರೆಗೂ ಅವನೊಳಗೇ ಉಳಿದುಬಿಟ್ಟವು!

ಇದಕ್ಕೆ ನ್ಯಾಯ ಕೊಡಲೋ ಎಂಬಂತೆ ಕುವೆಂಪು ಮತ್ತು ಸುಜನಾ ಅವರ ಕೃತಿಗಳು ಏಕಲವ್ಯನನ್ನು ಹೊಸನೋಟದಿಂದ ನೋಡುವ ಪ್ರತಿಭಟನೆಯ ಮನೋಭಾವದ ಪುನಃಸೃಷ್ಟಿಯ ಕೃತಿಗಳಾಗಿವೆ. ಸುಜನಾ ಅವರ ಮಹಾಭಾರತದ ಯುದ್ಧೋತ್ತರ ‘ಯುಗಸಂಧ್ಯಾ’ ಮಹಾಕಾವ್ಯದಲ್ಲಿ ಅರ್ಜುನನೇ ‘ಕಡೆಗು ಗುರುವ ಕೊಂದವ ನಾನೆ!’ ಎಂದು ಪ್ರಾಯಶ್ಚಿತ್ತಗೊಳ್ಳುವಂತೆ ಏಕಲವ್ಯನ ಮುಂದೆ ಒಪ್ಪಿಕೊಳ್ಳುತ್ತಾನೆ. ಇದರಿಂದ ಕಡುನೊಂದ ಏಕಲವ್ಯ ನಿಟ್ಟುಸಿರಿನಲಿ ನುಂಗಿದನು ಮನದ ದುಃಖವನು. ‘ದುಃಖವನು ನುಂಗುವುದು ಒಂದು ಶ್ರೇಷ್ಠ ತಪಸ್ಸೇ ಸರಿ. ಎಲ್ಲ ಕಲೆ, ತತ್ತ್ವಜ್ಞಾನ, ಸೌಂದರ್ಯ– ಇವುಗಳ ಸಾಕ್ಷಾತ್ಕಾರವು ಈ ದುಃಖ ನುಂಗುವ ಶಕ್ತಿಯಲ್ಲಿದೆ’. ಗುರುವಿಗೆ ಹೆಬ್ಬೆರಳನ್ನು ನೀಡಿದ ದಿನದಿಂದಲೇ ನನ್ನ ಸ್ಥಳ ಮೋಸ, ಕುತಂತ್ರ, ಯುದ್ಧದಾಹಗಳಿಂದ ಕೂಡಿದ ಹಸ್ತಿನಾವತಿಯಲ್ಲ! ಬದಲಿಗೆ ಕಾಡು ನನ್ನ ಸ್ಥಳವೆಂದು ತಿಳಿದು ಇಲ್ಲಿಯೇ ನೆಲೆಸುತ್ತಾನೆ. ಇಲ್ಲಿ ಏಕಲವ್ಯನಲ್ಲಿ ಕಂಡುಬರುವುದು ದ್ವೇಷವನ್ನು ಮೌನದಿಂದ ಗೆಲ್ಲುವ ಬಗೆಯನ್ನು.

ಕುವೆಂಪು ತಮ್ಮ ‘ಬೆರಳ್ಗೆ ಕೊರಳ್’ ಕೃತಿಯಲ್ಲಿ ಏಕಲವ್ಯನಿಗಾದ ಅನ್ಯಾಯವನ್ನು ಸಹಿಸದೆ ಅದಕ್ಕೆ ಮಾರುತ್ತರವಾಗಿ ಏಕಲವ್ಯನ ತಾಯಿಯ ಮೂಲಕ ದ್ರೋಣರಿಗೆ ಶಾಪವನ್ನೇ ಕೊಡಿಸಿಬಿಟ್ಟರು! ತಾಯಿ ಬಂದು ತನ್ನ ಮಗನಿಗೆ ಒದಗಿದ ದುರವಸ್ಥೆಯನ್ನು ಕಂಡು ಕರುಳಿರಿಯುವ ಸಂಕಟದಿಂದ ಕುಪಿತಳಾಗಿ ‘ಆಗ್ಗೆ ಬಲಿ ನನ್ನ ಕಂದನ ಬೆರಳ್, ಬಲಿಯಕ್ಕೆ ಆ ಪಾಪಿಯ ಕೊರಳ್’ ಎಂದು ಶಪಿಸುತ್ತಾಳೆ. ‘ಅಂತೆ ದ್ರೋಣರ ಕರ್ಮದ ಪಾಂಗು ಮರಿಗೆ ಮರಿ; ಮರಿಗೆ ಮರಿ; ಬೆರಳ್ಗೆ ಕೊರಳ್’ನ್ನು ಪ್ರತೀಕಾರದ ರೂಪದಲ್ಲಿ ಪಡೆಯಿತು. ದ್ರೋಣರಲ್ಲಿದ್ದ ಕಾಠಿಣ್ಯ, ಶ್ರೇಷ್ಠತೆಯ ಅಹಂಕಾರ, ಅಸಹನೆಯ ಗುಣಗಳು ಅವರ ‘ಗುರು’ತನವನ್ನು ಮಸುಕುಗೊಳಿಸಿದವು. ದ್ರೋಣರು ಯಾರನ್ನು ಲೋಕೈಕವೀರನನ್ನಾಗಿ ಮಾಡಲು ಏಕಲವ್ಯನ ಹೆಬ್ಬೆರಳನ್ನು ಬಲಿ ಪಡೆದಿದ್ದರೋ, ಅದೇ ಲೋಕೈಕವೀರ ಯುದ್ಧರಂಗದಲ್ಲಿ ತನ್ನ ಬಿಲ್ವಿದ್ಯೆ ಕಲಿಸಿದ ಗುರು ದ್ರೋಣರ ಶಿರವನ್ನೇ ತರಿದ! ಹೀಗೆ ನೊಂದ ತಾಯಿಯ ಕುಪಿತ ಮನಸ್ಸಿನ ಶಾಪ ಮಹಾಭಾರತದಲ್ಲಿ ನಿಜವೇ ಆಯಿತು.

‘ಶೂದ್ರ ತಪಸ್ವಿ’ ಕೃತಿಯಂತೆ ‘ಬೆರಳ್ಗೆ ಕೊರಳ್’ ಕೃತಿಯಲ್ಲಿಯೂ ಪ್ರತಿಲೋಕವನ್ನೇ ಸೃಷ್ಟಿಸುವ ಕುವೆಂಪು ಅವರ ಪ್ರತಿಭೆಯ ಹಿನ್ನೆಲೆಯಲ್ಲಿರುವ ಹೊಯ್ದಾಟ, ಮಾನವೀಯತೆಯ ತುಡಿತ, ಶಾಸ್ತ್ರ ಪುರಾಣಗಳ ಬಗ್ಗೆ ಅವರಿಗಿರುವ ಸಂಘರ್ಷ, ಶೂದ್ರ ಪ್ರತಿಭೆಗಳ ಕನಸುಗಳನ್ನು ಬಲಿಪಡೆಯುವ ಆರ್ಷೇಯ ಭಾರತದಲ್ಲಿದ್ದ ತರತಮಭಾವಗಳ ಬಗೆಗಿನ ಪ್ರತಿರೋಧವೇ ಈ ಕೃತಿಯ ಮೂಲ ಶೋಧ.

ಮಾನವೀಯತೆಯೊಂದಿಗೆ ಬೆಸೆದುಕೊಂಡಿರುವ ವೈಚಾರಿಕತೆಯ ಸೊಗಸು, ನೈತಿಕತೆ ಹಾಗೂ ಸಾಮಾಜಿಕ ನ್ಯಾಯದ ಒಲುವುಗಳಲ್ಲಿ ಬೇರೂರಿದ ‘ಬೆರಳ್ಗೆ ಕೊರಳ್’ ಕೃತಿ ಶೂದ್ರರು, ದಲಿತರು, ಮಹಿಳೆಯರು ಹಾಗೂ ಆದಿವಾಸಿಗಳ ಬಗೆಗೆ ಮೇಳೈಸಿರುವ ತರತಮ ಭಾವಗಳನ್ನು ಮುನ್ನೆಲೆಗೆ ತರುತ್ತದೆ.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಕೆಲವರಿಗೆ ಯಶಸ್ಸು ಸಿಕ್ಕುತ್ತದೆ. ಆದರೆ ಅದಕ್ಕೆ ಪಾತ್ರರು ಬೇರೆಯವರು ಆಗಿರುತ್ತಾರೆ.
  —ಅ.ನ. ಕೃಷ್ಣರಾವ್
- ಸಜ್ಜನರಂತೆ ಮುಖವಾಡ ಧರಿಸುತ್ತಿರುವ ಜನರ ಬಗ್ಗೆ ಎಚ್ಚರದಿಂದಿರಬೇಕು.
  —ದ.ರಾ. ಬೇಂದ್ರೆ
- ಒಳ್ಳೆಯದನ್ನು ವರ್ಣಿಸುವಾಗ ಮಾತು ಹೆಚ್ಚಾಗಲಿ. ಅಲ್ಲದ್ದನ್ನು ಕಂಡಾಗ ಮಾತು ಕೊಂಚಾಗಲಿ.
  —ಬಿ.ಎಂ.ಶ್ರೀ
- ಅರಸಾದೋನು ಆಳಬೇಕು; ಅಳಬಾರದು. ಅಳೋ ಸಮಯ ಬಂದರೂ ಅದು ಮಾನಸಿಕವಾಗಿರಬೇಕು. ಕಣ್ಣಲ್ಲಿ, ಮುಖದಲ್ಲಿ ಕಾಣಬಾರದು.
  —ತರಾಸು
- ಮಾನವ ಕೆಟ್ಟ ಕೆಲಸಗಳನ್ನು ಮಾಡಲು ಯೋಚಿಸುವುದಿಲ್ಲ. ಆದರೆ ಒಳ್ಳೆಯ ಕೆಲಸ ಮಾಡಲು ಬಹಳ ಯೋಚಿಸುತ್ತಾನೆ.
  —ಶೇಷಗಿರಿರಾವ್
- ನಮಗೆ ಬೇಕಾಗಿರುವುದು ಧರ್ಮ ತೋರಿಸಿಕೊಟ್ಟಿರುವ ನೈತಿಕ ಮೌಲ್ಯಗಳನ್ನು ಮುಂದಿನ ತಲೆಮಾರಿಗೆ ಹರಿಸುವ ದಾರಿ ಮತ್ತು ಅದು ಬೋಧಿಸುವ ಧ್ಯಾನದ ಶಿಸ್ತನ್ನು ಅರ್ಥಮಾಡಿಕೊಳ್ಳುವ ಮನಸ್ಸು.
  —ಯು.ಆರ್. ಅನಂತಮೂರ್ತಿ
- ಅಂತರಂಗದ ನಿಷ್ಠೆ ಇಲ್ಲದಿದ್ದರೆ ಸ್ನೇಹ, ಧೈರ್ಯ ಎಲ್ಲಿಂದ ಬರುತ್ತದೆ?
  —ಎಸ್.ಎಲ್. ಭೈರಪ್ಪ
- ಸಂತೆಯಲ್ಲಿದ್ದು ಏಕಾಂತತೆಯತ್ತ ಮುಖ ಮಾಡುವುದು ಸಜ್ಜನರ ಲಕ್ಷಣ.
  —ಗಳಗನಾಥ